# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 26–12–2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಮುನೀಂದ್ರಕುಮಾರ್.ಕೆ.ಎ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ತೇಜಸ್ವಿನಿ ಎನ್.ರಾಜು – ಸದಸ್ಯರು | ಉಪ ಆಯುಕ್ತರು (ಆಸ್ತಿಗಳು), |
| ಮುನಿಸ್ವಾಮಿಗೌಡ – ಸದಸ್ಯರು | ಸಹಾಯಕ ಕಾನೂನು ಅಧಿಕಾರಿ, |
| ಕೆ. ಉಮೇಶ್‌ಶೆಟ್ಟಿ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ), |
| ಕೆ. ಪೂರ್ಣಿಮ – ಸದಸ್ಯರು | --- |
| ಗಂಗಾಂಬಿಕೆ – ಸದಸ್ಯರು | --- |
| ಕ್ವೀನ್‌ಎಲಿಜೆಬತ್ – ಸದಸ್ಯರು | --- |
| ನೂರ್ ಜಹಾನ್ – ಸದಸ್ಯರು | --- |
| ಟಿ.ಎ. ಗಾಯಿತ್ರಿ – ಸದಸ್ಯರು | --- |
| ಗೈರು ಹಾಜರಿದ್ದ ಸದಸ್ಯರುಗಳು | --- |
| ಸುರೇಶ್. ಹೆಚ್ – ಸದಸ್ಯರು | |
| ಆನಂದ್. ವಿ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/130/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/269/10–11, ದಿನಾಂಕ : 01.10.2012 ರಲ್ಲಿ ವಿವರಿಸಿರುವಂತೆ, ವಾರ್ಡ್–04, ಶ್ರೀ.ಎಸ್.ಮುನಿರಾಜು, ರಾಜನುಕುಂಟೆ ಯಲಹಂಕ, ಬೆಂಗಳೂರು–64 ಇವರು ಯಲಹಂಕ ಉಪನಗರ ದೊಡ್ಡಬಳ್ಳಾಪುರ ಮುಖ್ಯರಸ್ತೆ ಮತ್ತು 1ನೇ 'ಎ' ಕ್ರಾಸ್, ಶೇಷಾದ್ರಿಪುರಂ ಕಾಲೇಜು ಹತ್ತಿರ ಪಾದಚಾರಿ ರಸ್ತೆಯ ಹಿಂಬದಿಯಲ್ಲಿ 10x10 ಅಳತೆಯ ನಂದಿನಿ ಹಾಲಿನ ಕೇಂದ್ರವನ್ನು ನಡೆಸಲು ಹೊಸದಾಗಿ ಗುತ್ತಿಗೆಗೆ ನೀಡುವ ಬಗ್ಗೆ ಮಾನ್ಯ ಆಯುಕ್ತರ ದಿನಾಂಕ:19–11–2011ರ ಅನುಮೋದಿತ ಟಿಪ್ಪಣಿಯೊಂದಿಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿತ್ತು.

ಹಾಲಿನ ಬೂತ್ ನಡೆಸಲು ಅನುಮತಿ ಕೋರಿರುವ ಈ ಪ್ರಕರಣವು ಹೊಸ ಪ್ರಕರಣವಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ಬೆಂಗಳೂರು ದಿನಾಂಕ:02–06–2003ರ ಮಾರ್ಗಸೂಚಿ ಕ್ರಮ ಸಂಖ್ಯೆ:11ರನ್ವಯ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನೂಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಅಂತಹ ಸ್ವತ್ತುಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂಬುದಾಗಿ ಸೂಚನೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಅರ್ಜಿದಾರರ ಮನವಿಯನ್ನು ಪರಿಗಣಿಸಲು ಅವಕಾಶವಿಲ್ಲವೆಂಬ ಅಂಶವನ್ನು ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿತ್ತು.

ಈ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬಿಬಿಎಂಪಿ ಸಭೆಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರವರ ಟಿಪ್ಪಣಿ ದಿನಾಂಕ:19–11–2011ರ ಟಿಪ್ಪಣಿಯನ್ನು ಮಾರ್ಪಡಿಸಿ ನಂದಿನಿ ಹಾಲಿನ ಮಳಿಗೆ ಸ್ಥಾಪಿಸಲು ಗುತ್ತಿಗೆಗೆ ನೀಡಲು ತೀರ್ಮಾನಿಸಲಾಗಿದೆ. ಪ್ರಸ್ತುತ ಸ್ಥಾಯಿ ಸಮಿತಿಗಳು ಹಾಗೂ ಬಿಬಿಎಂಪಿ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಕಾರ್ಯಗತಗೊಳಿಸಿದಲ್ಲಿ ಇದು ಮಾರ್ಗಸೂಚಿಯ ಉಲ್ಲಂಘನೆಯಾಗಿರುತ್ತದೆ.

ಆದುದರಿಂದ, ನಯೋಅಸ್ಥಾಸ/156/2011–12, ದಿನಾಂಕ:20–12–2011ರ ನಿರ್ಣಯ, ತೆಆಸ್ಥಾಸ/494/2011–12, ದಿನಾಂಕ:20–03–2012ರ ನಿರ್ಣಯ ಹಾಗೂ ವಿಷಯದ ಸಂಖ್ಯೆ:22(367)2011–12, ದಿ:28–03–2012

ರಂದು ತೆಗೆದುಕೊಂಡಿರುವ ನಿರ್ಣಯಗಳನ್ನು ಕೆ.ಎಂ.ಸಿ ಕಾಯ್ದೆ–1976 ಕಲಂ–98(2)ರನ್ವಯ ರದ್ದುಗೊಳಿಸಿ ಸೂಕ್ತ ಆದೇಶ ಹೊರಡಿಸಲು ಕೋರಿ ದಿನಾಂಕ:16–05–2012 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ:ನಅಇ 222 ಎಂಎನ್‌ಜಿ 2012, ದಿನಾಂಕ:17–08–2012ರ ಪತ್ರದಲ್ಲಿ ಸರ್ಕಾರದ ಆದೇಶ ಸಂಖ್ಯೆ:129 ಟಿಎಂಡಿ 2002 ದಿನಾಂಕ:02–06–2003ರ ಮಾರ್ಗಸೂಚಿಯ ಕ್ರಮ ಸಂಖ್ಯೆ:VI ರನ್ವಯ ಪಾಲಿಕೆಯ ಸ್ವತ್ತುಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡಬೇಕಾಗಿದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆಯ ದಿನಾಂಕ: 20–12–2011ರ ವಿಷಯ ಸಂಖ್ಯೆ:ನಯೋಅಸ್ಥಾಸ/156/2011–12, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಭೆಯ ದಿನಾಂಕ: 20–03–2012ರ ವಿಷಯ ಸಂಖ್ಯೆ:ತೆಆಸ್ಥಾಸ/494/2011–12 ಹಾಗೂ ಪಾಲಿಕೆಯ ಸಭೆಯ ದಿನಾಂಕ:28–03–2012ರ ವಿಷಯ ಸಂಖ್ಯೆ:22(367)2011–12 ರಲ್ಲಿ ತೆಗೆದುಕೊಂಡಿರುವ ನಿರ್ಣಯಗಳು ಹಾಗೂ ಪಾಲಿಕೆಯ ಆಯುಕ್ತರ ಹಿತಾಸಕ್ತಿಗೆ ದಕ್ಕೆಯಾಗುತ್ತದೆ. ಸರ್ಕಾರದ ದಿನಾಂಕ: 02–06–2003ರ ಆದೇಶದ ಉಲ್ಲಂಘನೆಯಾಗುತ್ತದೆ. ಎಂಬುದಾಗಿ ತಿಳಿಸುತ್ತಾ ಪಾಲಿಕೆಯ ಸಮಿತಿಗಳು ತೆಗೆದುಕೊಂಡ ನಿರ್ಣಯಗಳನ್ನು ರದ್ದುಗೊಳಿಸುವ ಬಗ್ಗೆ ಸಮಿತಿಯ ಹೇಳಿಕೆ /ಸಮಜಾಯಿಷಿಗಳೇನಾದರೂ ಇದ್ದಲ್ಲಿ ಈ ನೋಟೀಸ್ ತಲುಪಿದ 15 ದಿನಗಳೊಳಗಾಗಿ ಸರ್ಕಾರಕ್ಕೆ ಲಿಖಿತವಾಗಿ ಕಳುಹಿಸಿಕೊಡುವಂತೆ ಆದೇಶಿಸಿರುತ್ತದೆ.

ಆದ್ದರಿಂದ, ಸರ್ಕಾರವು ನೀಡಿರುವ ಕಾರಣಕೇಳಿ ನೋಟೀಸ್‌ಗೆ ಸಮಜಾಯಿಷಿ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಸರ್ಕಾರದ ದಿನಾಂಕ: 17–08–2012ರ ಕಾರಣ ಕೇಳಿ ನೋಟಿಸಿಗೆ ಸಂಬಂಧಿಸಿದಂತೆ ಪರಿಶೀಲಿಸಲಾಗಿ, ಯಲಹಂಕ ಉಪನಗರದಲ್ಲಿರುವ ಶೇಷಾದ್ರಿಪುರಂ ಕಾಲೇಜು ಹತ್ತಿರ ನಂದಿನಿ ಹಾಲಿನ ಕೇಂದ್ರಕ್ಕೆ ಜಾಗ ನೀಡುವಂತೆ ಯಲಹಂಕ ಎ ಸೆಕ್ಟರ್ ನಿವಾಸಿಗಳ ಕೋರಿಕೆಯನ್ನು ಹಾಗೂ ಸ್ಥಳಿಯ ಪಾಲಿಕೆಯ ಸದಸ್ಯರ ಕೋರಿಕೆಯನ್ನು ಪರಿಗಣಿಸಿ, ಸಾರ್ವಜನಿಕ ಹಿತದೃಷ್ಟಿಯಿಂದ ನಿರುದ್ಯೋಗಿಯಾಗಿರುವ ಶ್ರೀ ಎಸ್ ಮುನಿರಾಜು ರವರ ಜೀವನ ನಿರ್ವಹಣೆಯ ಸಲುವಾಗಿ ಮಾನವಿಯತೆಯ ದೃಷ್ಟಿಯಿಂದ ಪ್ರಸ್ತಾಪಿತ ಜಾಗವನ್ನು ನಂದಿನಿ ಹಾಲಿನ ಕೇಂದ್ರ ನಡೆಸಲು ಅನುಮತಿ ನೀಡಲಾಗಿದೆಯಂದು ಸರ್ಕಾರದ ಗಮನಕ್ಕೆ ತರಲು ಸಮಿತಿಯು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–11–2012ರ ನಿರ್ಣಯ.

ನಿರ್ಣಯ : **ದಿ. 06–11–2012ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯದ ಮೇಲೆ ಸರ್ಕಾರವು ತೆಗೆದುಕೊಳ್ಳುವ ಅಂತಿಮ ತೀರ್ಮಾನಕ್ಕೆ ಬದ್ದವಾಗಿರುವುದಾಗಿ ಸಮಿತಿಯು ತೀರ್ಮಾನಿಸಿತು.**

## *02]. ವಿಷಯದ ಸಂಖ್ಯೆ :–ತೆಆಸ್ಥಾಸ/131/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/112/12–13, ದಿನಾಂಕ : 05–06–2012 ರಲ್ಲಿ ವಿವರಿಸಿರುವಂತೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ರವರು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ರವರ ಪತ್ರದ ಸಂಖ್ಯೆ : ಕರಾಸಾ.ಕೇಕ:ಕಾಇ:883/11–12, ದಿನಾಂಕ : 16–08–2011. ರಂತೆ ಆಯುಕ್ತರು ಬಿಬಿಎಂಪಿ ರರಿಗೆ ಪತ್ರ ಬರೆದು ಜಕ್ಕರಾಯನಕೆರೆ ಆವರಣದಲ್ಲಿರುವ ಮಹಾನಗರ ಪಾಲಿಕೆಗೆ ಸೇರಿದ 4 ಎಕರೆ ಪ್ರದೇಶವನ್ನು ಹಾಗೂ ಕೃಷ್ಣಫ್ಲೋರ್ ಮಿಲ್‌ಗೆ ಸೇರಿದ ನಿವೇಶನವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ತಾತ್ಕಾಲಿಕವಾಗಿ ಒದಗಿಸುವಂತೆ ಕೋರಿರುತ್ತಾರೆ. ಈಗ ಕೆಂಪೇಗೌಡ ಬಸ್ ನಿಲ್ದಾಣದ ಪ್ರದೇಶದಲ್ಲಿ ಮೆಟ್ರೋ ಕಾಮಗಾರಿಗಳು ನಡೆಯುತಿದ್ದು, ಈ ಪ್ರದೇಶದಲ್ಲಿರುವ 4 ಬಸ್ ಘಟಕಗಳ ಮತ್ತು ಭಾಗಶಃ ಬಸ್ ನಿಲ್ದಾಣವನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುವುದು ಅನೀವಾರ್ಯವಾಗಿರುವುದು. ಆದುದರಿಂದ, ಪ್ರಸ್ತಾಪಿತ ಪ್ರದೇಶವನ್ನು ತಮ್ಮ ಸಂಸ್ಥೆಗೆ ಸದ್ಯಕ್ಕೆ ನೀಡುವಂತೆ ಕೋರಿರುತ್ತಾರೆ. ಸನ್ಮಾನ್ಯ ಗೃಹ ಮತ್ತು ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 11–06–2011 ರಂದು ನಡೆದ ಸಭೆಯಲ್ಲಿ ಈ ಸಂಬಂಧ ನಡವಳಿಯಾಗಿದ್ದು, ಇದರಂತೆ ಪ್ರಸ್ತುತ ಪ್ರದೇಶವನ್ನು ಕೆ.ಎಸ್.ಆರ್.ಟಿ.ಸಿ ಮತ್ತು ಬಿಎಂಟಿಸಿ ಸಂಸ್ಥೆಗೆ ನೀಡಬೇಕೆಂದು ವ್ಯವಸ್ಥಾಪಕ ನಿರ್ದೇಶಕರು ಕೋರಿರುತ್ತಾರೆ.

ಈ ವಿಷಯದಲ್ಲಿ ಪ್ರಸ್ತುತ ಪ್ರದೇಶದಲ್ಲಿನ ಸ್ಥಳಿಯರೊಂದಿಗೆ ಸಮಾಲೋಚಿಸಿ ಅಭಿಪ್ರಾಯ ನೀಡುವಂತೆ ಅಪರ ಆಯುಕ್ತರು (ಪಶ್ಚಿಮ) ವಲಯ ರವರನ್ನು ಕೋರಲಾಗಿತ್ತು. ಸದರಿ ಪ್ರದೇಶದ ನಿವಾಸಿಗಳು ರಸ್ತೆ ಸಾರಿಗೆ ಸಂಸ್ಥೆಗೆ ಪ್ರಸ್ತುತ ಜಾಗವನ್ನು ನೀಡುವ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದು, ಈ ಬಗ್ಗೆ ಸ್ಥಳೀಯ ಮಹಜರ್ ನಡೆಸಿ ಅಪರ ಆಯುಕ್ತರು (ಪಶ್ಚಿಮ) ವಲಯ ರವರು ವರದಿ ಸಲ್ಲಿಸಿರುತ್ತಾರೆ.

ಈ ಮೇಲಿನ ಹಿನ್ನೆಲೆಯಲ್ಲಿ ಜಕ್ಕರಾಯನಕೆರೆ ಆವರಣದಲ್ಲಿರುವ 4 ಎಕರೆ ನಿವೇಶನವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ತಾತ್ಕಾಲಿಕವಾಗಿ ಬಸ್ ನಿಲ್ದಾಣಕ್ಕಾಗಿ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿರುವ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 05–06–2012ರ ಟಿಪ್ಪಣಿಯನ್ನು ಪರಿಶೀಲಿಸಿ, ಸದರಿ ಜಕ್ಕರಾಯನಕೆರೆ ಅವರಣದಲ್ಲಿರುವ 4 ಎಕರೆ ಜಮೀನಿನಲ್ಲಿ ಕೆಎಸ್‌ಆರ್‌ಟಿಸಿ/ಬಿಎಂಟಿಸಿ ಸಂಸ್ಥೆಗೆ ತಾತ್ಕಾಲಿಕ ಬಸ್ ನಿಲ್ದಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಯಾವುದೇ ಕಾರಣಕ್ಕೂ ವಾಣಿಜ್ಯ ಉಪಯೋಗಕ್ಕೆ ಉಪಯೋಗಿಸದಂತೆ ಷರತ್ತು ವಿಧಿಸಿ ಗುತ್ತಿಗೆಗೆ ನೀಡುವ ಮಾರ್ಪಾಡಿನೊಂದಿಗೆ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–11–2012ರ ನಿರ್ಣಯ.

**ನಿರ್ಣಯ : ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ. 06–11–2012ರ ನಿರ್ಣಯವನ್ನು ಸಮಿತಿಯು ಒಪ್ಪಿರುತ್ತದೆ.**

## *03]. ವಿಷಯದ ಸಂಖ್ಯೆ :–ತೆಆಸ್ಥಾಸ/132/2012–13*

ಆಯುಕ್ತರ ಟಿಪ್ಪಣಿ ದಿನಾಂಕ : 29.11.2012 ರಲ್ಲಿ ವಿವರಿಸಿರುವಂತೆ, ಶ್ರೀ. ವೈ ಎನ್ ಅಶ್ವಥ್, ಅಧ್ಯಕ್ಷರು, ತೋಟಗಾರಿಕೆ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಉಲ್ಲೇಖಿತ ಪತ್ರದಲ್ಲಿ 2012–13ನೇ ಸಾಲಿನ ಆಯವ್ಯಯದಲ್ಲಿ ಅನುದಾನ ನಿಗಧಿಪಡಿಸಲು ಕೋರಿರುತ್ತಾರೆ.

ಯಲಹಂಕ ವಲಯದ ಯಲಹಂಕ–ಜಕ್ಕೂರು ಮುಖ್ಯ ರಸ್ತೆಯನ್ನು ರೈತರ ಸಂತೆ (ರಾಷ್ಟ್ರೀಯ ಹೆದ್ದಾರಿ–7)ರಿಂದ ಬೃಹತ್ ನೀರು ಕಾಲುವೆ (ಎಸ್.ಡಬ್ಲ್ಯೂ.ಡಿ) ವರೆಗೆ ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಗೆ ರೂ.100.00 ಲಕ್ಷಗಳ ಅಂದಾಜು ಪಟ್ಟಿ ತಯಾರಿಸಿ ಸದರಿ ಮೊತ್ತವನ್ನು ಬಿಡುಗಡೆ ಮಾಡಲು ಕೋರಿದ್ದು, ಈ ವೆಚ್ಚವನ್ನು 2012–13ನೇ ಸಾಲಿನ ಆಯವ್ಯಯದಲ್ಲಿ ಕೆಳಕಂಡಂತೆ ಮೊತ್ತವನ್ನು ಮೀಸಲಿರಿಸಲಾಗಿದೆ:

ಲೆಕ್ಕಶೀರ್ಷಿಕೆ ಪಿ–2786–Widening and Streghtening of Roads at Kempegowda Ward Rs.100.00 Lakhs.

ಆದರೆ ವಾರ್ಡ್ ನಂ 1ರ ಸದಸ್ಯರು ಮತ್ತು ತೋಟಗಾರಿಕೆ ಸ್ಥಾಯಿ ಸಮಿತಿಯ ಅಧ್ಯಕ್ಷರು ಮೇಲ್ಕಂಡ ಲೆಕ್ಕಶೀರ್ಷಿಕೆ ಅಡಿಯಲ್ಲಿ "Widening of Jakkur Road near Raithra Sante From NH-7 upto SWD in Yelahanka" ಈ ಕಾಮಗಾರಿಯನ್ನು ರೂ.100.00 ಲಕ್ಷ ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ಕೋರಿರುತ್ತಾರೆ. ಈ ಬಗ್ಗೆ ನಿರ್ಣಯ ಕೈಗೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ಆಯುಕ್ತರ ದಿ. 29–11–2012ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿರುತ್ತದೆ.**

## *04]. ವಿಷಯದ ಸಂಖ್ಯೆ :–ತೆಆಸ್ಥಾಸ/133/2012–13*

ಆಯುಕ್ತರ ಟಿಪ್ಪಣಿ ದಿನಾಂಕ : 30.11.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ವಲಯ ವ್ಯಾಪ್ತಿಯ ವಾರ್ಡ್ ನಂ.5ರ "Extension of Reva College road to 25mtrs to Hosahalli (to link International Airport)" ಮುಖ್ಯರಸ್ತೆಗೆ ಸಂಪರ್ಕಿಸುವ ರಸ್ತೆಯನ್ನು ಅಗಲೀಕರಣಗೊಳಿಸುವ ಕಾಮಗಾರಿಯನ್ನು 2012–13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ : 157ರ ಪಿ–2908ರಲ್ಲಿ ರೂ.100.00 ಲಕ್ಷಗಳನ್ನು ಮೀಸಲಿರಿಸಲಾಗಿದೆ. ಸದರಿ ಕಾಮಗಾರಿಯ Detailed project report ತಯಾರಿಸಲು ಅವಶ್ಯವಿರುವ ರೂ.3,15,000/– ಗಳನ್ನು ಮುಂಗಡವಾಗಿ ಪಾವತಿಸಲು ಕೋರಲಾಗಿರುತ್ತದೆ. ಮುಂದುವರಿದು ಸದರಿ

ಕಾಮಗಾರಿಯನ್ನು 2012–13ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–2908 ಅಡಿಯಲ್ಲಿ ರೂ.100.00 ಲಕ್ಷಗಳ ಅನುದಾನ ಒದಗಿಸುವ ಬಗ್ಗೆ ನಿರ್ಣಯ ಕೈಗೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ಆಯುಕ್ತರ ದಿ. 30–11–2012ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿರುತ್ತದೆ.**

## *05]. ವಿಷಯದ ಸಂಖ್ಯೆ :–ತೆಆಸ್ಥಾಸ/134/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/160/12–13, ದಿನಾಂಕ : 05.06.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್–94, ಗಾಂಧಿನಗರ ವಲಯ ವ್ಯಾಪ್ತಿಗೆ ಬರುವ ಉಪ್ಪಾರಪೇಟೆ ಪೋಲಿಸ್ ಠಾಣೆ ಎದುರು ನಗರ ಪಾಲಿಕೆ 10*10 ಖಾಲಿ ಜಾಗದಲ್ಲಿ ಶ್ರೀ. ವಾಟಾಳ್ ನಾಗರಾಜ್ ಪ್ರತಿಮೆ ಪ್ರತಿಷ್ಠಾಪಿಸಲು ಮಹಾನಗರ ಪಾಲಿಕೆ ವತಿಯಿಂದ ಜಾಗವನ್ನು ಮಂಜೂರು ಮಾಡಿಕೊಡುವಂತೆ ಕೋರಿರುತ್ತಾರೆ. ಹಾಗೂ ಪ್ರತಿಮೆಯ ವೆಚ್ಚವನ್ನು ಪ್ರತಿಷ್ಠಾಪನದ ವತಿಯಿಂದಲೇ ಭರಿಸಲಾಗುವುದೆಂದು ತಿಳಿಸಿರುತ್ತಾರೆ.

ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಗಾಂಧಿನಗರ) ಉಪ ವಿಭಾಗ ರವರು ಸ್ಥಳ ಪರಿಶೀಲಿಸಿ ನಕ್ಷೆ ಸಲ್ಲಿಸಿದ್ದು, ಸದರಿ ಸ್ಥಳವು ಪೂರ್ವ–ಪಶ್ಚಿಮ 32 ಮೀ ಉತ್ತರ–ದಕ್ಷಿಣ 25 ಮೀ (ಮಧ್ಯ) ಉತ್ತರ–ದಕ್ಷಿಣ 15ಮೀ. ಲಭ್ಯವಿದ್ದು, ಅರ್ಜಿದಾರರು ಕೋರಿರುವ 10*10 ಅಡಿಗಳ ಜಾಗವನ್ನು ಪ್ರತಿಮೆ ಸ್ಥಾಪಿಸಲು ನೀಡಬಹುದೆಂದು ಹಾಗೂ ಉಪ ಪೋಲೀಸ್ ಕಮಿಷನರ್ (ಪಶ್ಚಿಮ) ರವರು ಸದರಿ ಸ್ಥಳದಲ್ಲಿ ಕಂಚಿನ ಪ್ರತಿಮೆ ಸ್ಥಾಪನೆ ಬಗ್ಗೆ ನಿರಾಕ್ಷೇಪಣಾ ಪತ್ರವನ್ನು ಷರತ್ತುಗಳೊಂದಿಗೆ ದಿನಾಂಕ: 19–01–2012ರಂದು ನೀಡಿರುತ್ತಾರೆ.

1. 10*10 ಅಡಿಗಳುಳ್ಳ ಶ್ರೀ. ವಾಟಾಳ್ ನಾಗರಾಜ್ ರವರ ಕಂಚಿನ ಪ್ರತಿಮೆಯನ್ನು ನಕ್ಷೆಯಲ್ಲಿ ಸೂಚಿಸಿರುವಂತೆ ಉದ್ದೇಶಿತ ಸ್ಥಳದಲ್ಲಿ ಮಾತ್ರ ಸ್ಥಾಪಿಸಬೇಕು.
2. ಸ್ಥಳವನ್ನು ಬದಲಾವಣೆ ಮಾಡಕೂಡದು.
3. ಕಂಚಿನ ಪ್ರತಿಮೆ ಸ್ಥಾಪಿಸುವ ಸ್ಥಳದ ಬಹಳ ಹತ್ತಿರದಲ್ಲಿ ಶ್ರೀ. ಲೋಕಮಾನ್ಯ ತಿಲಕ್‌ಪಾರ್ಕ್ (ಚಿಕ್ಕಲಾಲ್‌ಬಾಗ್/ತುಳಸಿಪಾರ್ಕ್) ಇದ್ದು, ಈ ಸ್ಥಳಗಳಿಂದ ವಿವಿಧ ಸಂಘ ಸಂಸ್ಥೆಗಳು ರಾಜಕೀಯ ಪಕ್ಷದವರಿಂದ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಸಾವಿರಾರು ಕಾರ್ಯಕರ್ತರು, ರೈತರು, ಮೆರವಣಿಗೆ ಈ ಪ್ರತಿಮೆ ಸ್ಥಾಪಿಸುವ ಸಮೀಪದಲ್ಲೇ ಹೋಗುವುದರಿಂದ ಯಾರಾದರೂ ಪ್ರತಿಮೆಗೆ ಕಲ್ಲು ಹೊಡೆದು ವಿರೂಪಗೊಳಿಸುವ ಅಥವಾ ಅಪವಿತ್ರ ವಸ್ತುಗಳನ್ನು ಹಾಕಿ ಅವಮಾನಗೊಳಿಸುವ ಸಾಧ್ಯತೆಗಳಿಂದ ಉಂಟಾಗುವ ಸಮಸ್ಯೆಗಳನ್ನು ತಡೆಗಟ್ಟಲು ಕಂಚಿನ ಪ್ರತಿಮೆ ಸ್ಥಾಪಿಸಿದಾಗ ಪ್ರತಿಮೆಗೆ ಸೂಕ್ತವಾದ ಕಬ್ಬಿಣದ ತಂತಿ ಕವಚ (ಮೆಸ್) ಕಡ್ಡಾಯವಾಗಿ ಹಾಕಿಸತಕ್ಕದ್ದು,
4. ಈ ಪ್ರತಿಮೆ ಪಕ್ಕದಲ್ಲಿ ಸ್ಥಾಪಿಸಲು ವಿವಿಧ ಸಂಘಟನೆಗಳ ಮುಖಂಡರು ಮನವಿ ಪತ್ರ ಸಲ್ಲಿಸುವ ಸಾಧ್ಯತೆಗಳು ಇರುವುದರಿಂದ ಇದಕ್ಕೆ ಅನುಮತಿ ನೀಡಬಾರದು.
5. ಸಾಧ್ಯವಾದರೆ ಪ್ರತಿಮೆ ಸ್ಥಾಪಿಸಿದ ನಂತರ ಅದರ ಸುರಕ್ಷತೆ ದೃಷ್ಟಿಯಿಂದ ಪ್ರತಿಮೆ ವಿರೂಪಗೊಳಿಸುವ ಅಪವಿತ್ರಗೊಳಿಸಲು ಯತ್ನಿಸುವ ದುಷ್ಕರ್ಮಿಗಳ ಪತ್ತೆಗೆ ಅನುಕೂಲವಾಗುವಂತೆ ಕ್ಯಾಮರಾ ಅಳವಡಿಸಲು ಸೂಚಿಸುವುದು.

ಈ ಮೇಲೆ ತಿಳಿಸಲಾಗಿರುವ ಷರತ್ತುಗಳೊಂದಿಗೆ ಶ್ರೀ. ವಾಟಾಳ್ ನಾಗರಾಜ್ ಪ್ರತಿಮೆಯನ್ನು ಉಪ್ಪಾರಪೇಟೆ ಪೋಲಿಸ್ ಠಾಣೆ ಎದುರು ಪ್ರತಿಷ್ಠಾಪನೆ ಮಾಡಲು ಪ್ರಸ್ತೂತ ಜಾಗವನ್ನು ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆಯ

ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ ಮೇರೆಗೆ ಮಾನ್ಯ ಆಯುಕ್ತರ ದಿ: 05–06–2012ರ ಟಿಪ್ಪಣಿಯನ್ನು ಪರಿಶೀಲಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ 10*10 ಅಡಿಗಳ ಜಾಗವನ್ನು ಒಂದು ಭಾಗದಲ್ಲಿ (ಉಳಿದ ಪ್ರದೇಶವು ಪಾಲಿಕೆಯ ಬೇರೆ ಉದ್ದೇಶಕ್ಕೆ ಬಳಕೆಯಾಗುವಂತೆ) ನೀಡುವ ಷರತ್ತಿಗೆ ಒಳಪಟ್ಟು ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06.11.2012ರ ನಿರ್ಣಯ.

**ನಿರ್ಣಯ : ನಗರ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ದಿ. 06–11–2012ರ ನಿರ್ಣಯವನ್ನು ಸಮಿತಿಯು ಒಪ್ಪಿರುತ್ತದೆ.**

## *06]. ವಿಷಯದ ಸಂಖ್ಯೆ :–ತೆಆಸ್ಥಾಸ/135/2012–13*

ಆಯುಕ್ತರ ಟಿಪ್ಪಣಿ ದಿನಾಂಕ : 05.12.2012 ರಲ್ಲಿ ವಿವರಿಸಿರುವಂತೆ, ಶ್ರೀ.ಎಂ.ಗೋಪಿ, ಮಾನ್ಯ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 110 ರವರು ವಾರ್ಡ್ ಸಂಪಂಗಿರಾಮನಗರದ ಕನ್ನಿಕಾ ಪರಮೇಶ್ವರಿ ರಸ್ತೆಯಲ್ಲಿನ ಹಳೆಯ ವಾರ್ಡ್ ಕಛೇರಿ ಹಾಗೂ ಖಾಲಿ ಜಾಗ ಸೇರಿ ಒಟ್ಟು 4000 ಚದರ ಅಡಿ ವಿಸ್ತೀರ್ಣವಿದ್ದು, ಸದರಿ ಜಾಗದಲ್ಲಿ ಬೆಂಗಳೂರು ಒನ್, ವ್ಯಾಯಾಮ ಶಾಲೆ, ಟೈಲರಿಂಗ್ ತರಗತಿಗಳ ಕೊಠಡಿ, ಕಂದಾಯ ಕಛೇರಿ ಹಾಗೂ ಆರೋಗ್ಯ ಕಛೇರಿಗಳ ನಿರ್ಮಾಣಕ್ಕಾಗಿ ರೂ.200.00 ಲಕ್ಷಗಳ ಅನುದಾನವನ್ನು ಕೋರಿರುತ್ತಾರೆ.

ಸದರಿ ಕಾಮಗಾರಿ 2012–13ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–0541ರ ತುರ್ತು ನಿಧಿ ಅಡಿಯಲ್ಲಿ ಇರುವ ಒಟ್ಟು ರೂ.100.00 ಕೋಟಿಗಳ ಅನುದಾನದಲ್ಲಿ ಸದರಿ ಮೊತ್ತ ರೂ.200.00 ಲಕ್ಷಗಳ ಅನುದಾನ ಒದಗಿಸಲು ಕೋರಿರುತ್ತಾರೆ.

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಆದ್ಯ ಗಮನಕ್ಕೆ ತರುತ್ತಾ, ಪಾಲಿಕೆ ಸದಸ್ಯರು ಕೋರಿರುವ ಆರ್ಥಿಕ ಮೊತ್ತದ ಅನುದಾನವನ್ನು ನೀಡಲು, ಅನುಮೋದಿಸಲು ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ಆಯುಕ್ತರ ದಿ. 05–12–2012ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿರುತ್ತದೆ.**

## *07]. ವಿಷಯದ ಸಂಖ್ಯೆ :–ತೆಆಸ್ಥಾಸ136/2012–13*

ಆಯುಕ್ತರ ಟಿಪ್ಪಣಿ ದಿನಾಂಕ : 05.12.2012 ರಲ್ಲಿ ವಿವರಿಸಿರುವಂತೆ, ಜಂಟಿ ಆಯುಕ್ತರು (ಪೂರ್ವ) ವಲಯ ವ್ಯಾಪ್ತಿಯ, ಕಾರ್ಯಪಾಲಕ ಅಭಿಯಂತರರು ಶಿವಾಜಿನಗರದ ವಾರ್ಡ್ ನಂ.110ರ ವ್ಯಾಪ್ತಿಯಲ್ಲಿ ಬರುವ ಸಮಪಂಗಿರಾಮನಗರದ ಶಿವಾಜಿನಗರ ಪಾಲಿಕೆಯ ಕಟ್ಟಡದಲ್ಲಿ ತೆಲುಗು ಶಾಲೆ ಶಿಥಿಲಗೊಂಡಿದ್ದು, ಈ ಕಟ್ಟಡಕ್ಕೆ ಬಣ್ಣ ಮತ್ತು ಕೊಠಡಿಗೆ ಟೈಲ್ಸ್ ಹಾಕಲು ರೂ.20.00 ಲಕ್ಷಗಳ ಅನುದಾನವನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಒದಗಿಸುವಂತೆ ಶ್ರೀ. ಎಂ. ಗೋಪಿ, ನಗರ ಪಾಲಿಕೆ ಸದಸ್ಯರು, ವಾರ್ಡ್ ನಂ. 110, ಸಂಪಂಗಿರಾಮನಗರ ರವರು ದಿನಾಂಕ : 20.10.2012 ರಂದು ಉಲ್ಲೇಖದಂತೆ ಕೋರಿರುತ್ತಾರೆ.

ಮುಖ್ಯ ಅಭಿಯಂತರರು (ಪೂರ್ವ) ರವರು ದಿನಾಂಕ : 31.10.2012 ರಂದು ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀಷಿಕೆ ಪಿ–0426 ರಡಿಯಲ್ಲಿ ಅನುದಾನ ಒದಗಿಸಲು ಕೋರಿರುತ್ತಾರೆ. ಆದರೆ ಪ್ರಸ್ತುತ 2011–12ನೇ ಸಾಲಿನ ಆರ್ಥಿಕ ವರ್ಷ ಮುಕ್ತಾಯವಾಗಿರುವುದರಿಂದ ಪಾಲಿಕೆ ಸದಸ್ಯರು ಕೋರಿರುವ ಮೇರೆಗೆ ಸದರಿ ಕಾಮಗಾರಿಯನ್ನು 2012–13ನೇ ಸಾಲಿನ ಆಯವ್ಯಯದ ವಲಯ ಕಾಮಗಾರಿ– ಸಾರ್ವಜನಿಕ ಕಾಮಗಾರಿಗಳು, ಪುಟ ಸಂಖ್ಯೆ. 128ರ ಲೆಕ್ಕಶೀರ್ಷಿಕೆ ಪಿ–0475 (ವಿದ್ಯಾಇಲಾಖೆಯ ಕಟ್ಟಡ ನಿರ್ವಹಣೆ ಮತ್ತು ದುರಸ್ತಿ) ಅಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗೆ ನಿಗಧಿಯಾಗಿರುವ ರೂ.200.00 ಲಕ್ಷಗಳ ಅನುದಾನದಲ್ಲಿ ಪ್ರಸ್ತಾಪಿತ ಕಾಮಗಾರಿಗೆ ಅವಶ್ಯವಿರುವ ರೂ.20.00 ಲಕ್ಷಗಳ ಅನುದಾನ ಬಿಡುಗಡೆ ಮಾಡುವ ಬಗ್ಗೆ ನಿರ್ಣಯ ಕೈಗೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ಆಯುಕ್ತರ ದಿ. 05–12–2012ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿರುತ್ತದೆ.**

## *08]. ವಿಷಯದ ಸಂಖ್ಯೆ :-ತೆಆಸ್ಥಾಸ/137/2012-13*

ಆಯುಕ್ತರ ಟಿಪ್ಪಣಿ ದಿನಾಂಕ : 05.12.2012 ರಲ್ಲಿ ವಿವರಿಸಿರುವಂತೆ, ಶ್ರೀ.ಎಂ.ಗೋಪಿ, ಮಾನ್ಯ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 110 ರವರು ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ವಾರ್ಡ್ ಕಛೇರಿಗಳ ಸಂಕೀರ್ಣ ಕಟ್ಟಡದ ನಿರ್ಮಾಣ ಕಾಮಗಾರಿಗಾಗಿ ರೂ.150.00 ಲಕ್ಷಗಳ ಅನುದಾನ ಒದಗಿಸಲು ಕೋರಿದ್ದ ಮೇರೆಗೆ 2012-13ನೇ ಸಾಲಿನ ಆಯವ್ಯಯದ ಪುಟ 136ರಲ್ಲಿ ಲೆಕ್ಕಶೀರ್ಷಿಕೆ ಪಿ 2821 ರ ವಾರ್ಡ್ ಕಛೇರಿಯ ನಿರ್ಮಾಣದ ಅಡಿಯಲ್ಲಿ ರೂ.60.00 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ಬಾಕಿ ಉಳಿದ ರೂ.90.00 ಲಕ್ಷಗಳ ಅವಶ್ಯಕತೆಯ ಬಗ್ಗೆ ಕೋರಿರುತ್ತಾರೆ.

ಸದರಿ ಬಾಕಿ ರೂ.90.00 ಲಕ್ಷಗಳನ್ನು 2012-13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ : 137ರ ಲೆಕ್ಕಶೀರ್ಷಿಕೆ ಪಿ-1808ರ ವಾರ್ಡ್ ಕಛೇರಿಗಳ ನಿರ್ಮಾಣದ ಅಡಿಯಲ್ಲಿ ಮೀಸಲಿಟ್ಟಿರುವ ರೂ.1250.00 ಲಕ್ಷಗಳ ಅನುದಾನದಲ್ಲಿ ಭರಿಸಲು ಕೋರಿರುತ್ತಾರೆ.

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಆದ್ಯ ಗಮನಕ್ಕೆ ತರುತ್ತಾ, ಪಾಲಿಕೆ ಸದಸ್ಯರು ಕೋರಿರುವ ಆರ್ಥಿಕ ಮೊತ್ತದ ಅನುದಾನವನ್ನು ನೀಡಲು, ಅನುಮೋದಿಸಲು ಹಾಗೂ ಸೂಕ್ತ ನಿರ್ಣಯಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ಆಯುಕ್ತರ ದಿ. 05-12-2012ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿರುತ್ತದೆ.**

## *09]. ವಿಷಯದ ಸಂಖ್ಯೆ :-ತೆಆಸ್ಥಾಸ/ 138/2012-13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/211/10-11, ದಿನಾಂಕ : 05.09.2012ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:168, ಸ್ವತ್ತಿನ ಸಂಖ್ಯೆ:1, 20ನೇ ಅಡ್ಡರಸ್ತೆ, ಮಾರೇನಹಳ್ಳಿ ಕೆರೆ ಅಂಗಳದ ಸ್ವತ್ತಿನ ಮಾಲೀಕರಾದ ಶ್ರೀ ಕಾಮಾಕ್ಷಿ ಇವರು ಕಟ್ಟಡವನ್ನು ನಿರ್ಮಿಸಿ ವಾಸಮಾಡುತ್ತಿದ್ದಾರೆ. ಈ ಸ್ವತ್ತಿನ ಅಂಚಿನ ಭಾಗದ 14x20 ಅಡಿಗಳನ್ನು ಕ್ರಯಕ್ಕೆ ನೀಡುವಂತೆ ಕೋರಿರುತ್ತಾರೆ. ಶ್ರೀಮತಿ.ಕಾಮಾಕ್ಷಿಯವರು ಕೋರಿರುವ ಸ್ವತ್ತು ಪ್ರಸ್ತುತ ಉದ್ಯಾನವನದಲ್ಲಿ ಬರುತ್ತಿದ್ದು, ಈ ಪ್ರದೇಶವು ಕರ್ನಾಟಕ ಉದ್ಯಾನವನ, ಆಟದ ಮೈದಾನ ಮತ್ತು ತೆರೆದ ಪ್ರದೇಶಗಳ (ಪ್ರಿಸರ್ವೇಷನ್ ಅಂಡ್ ರೆಗ್ಯೂಲೇಷನ್)ಕಾಯ್ದೆ 1985ರನ್ವಯ ಸರ್ಕಾರದ ಅಧಿಸೂಚನೆಯ ಸಂಖ್ಯೆ:ನಅಇ/351/ಎಂಎನ್‌ಯು/2004, ದಿನಾಂಕ:15-04-2011ರಲ್ಲಿ ಅಧಿಸೂಚಿಸಲಾಗಿದೆ. ಈ ಅಧಿಸೂಚನೆಯಲ್ಲಿ ಪ್ರಕಟಣೆಗೊಂಡಿರುವ ಪ್ರದೇಶವನ್ನು ನಿರ್ದಿಷ್ಟ ಉದ್ದೇಶಕ್ಕೆ ಹೊರತುಪಡಿಸಿ ಇತರೇ ಯಾವುದೇ ಉದ್ದೇಶಕ್ಕೆ ಪ್ರತಿಬಂಧಿಸಲಾಗಿದೆ. ಆದ್ದರಿಂದ, ಶ್ರೀಮತಿ.ಕಾಮಾಕ್ಷಿಯವರು ಕೋರಿರುವ ಸ್ವತ್ತಿನ ಪಕ್ಕದ ಜಾಗವನ್ನು ಕ್ರಯಕ್ಕೆ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಪಾಲಿಕೆಯ ಆಯುಕ್ತರು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ.

ಪಾಲಿಕೆಯ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಸಮಿತಿಯು ದಿ:09-08-2011, ವಿಷಯ ಸಂಖ್ಯೆ:ನಯೋಸ್ಥಾಸ/75/2011-12 ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ದಿನಾಂಕ:26-09-2011 ರಂದು ವಿಷಯ ಸಂಖ್ಯೆ:ತೆಆಸ್ಥಾಸ.281/2011-12 ರಲ್ಲಿ ಹಾಗೂ ಪಾಲಿಕೆಯ ಸಭೆಯು ದಿನಾಂಕ:29-11-2011 ರಂದು, ವಿಷಯ ಸಂಖ್ಯೆ:49(218)/2011-12 ರಲ್ಲಿ ಶ್ರೀಮತಿ.ಕಾಮಾಕ್ಷಿ ಇವರಿಗೆ ರೂ.84,00,000/-ಗಳಿಗೆ ಕ್ರಯಕ್ಕೆ ನೀಡಲು ನಿರ್ಣಯಗಳನ್ನು ಕೈಗೊಂಡಿರುತ್ತದೆ.

ಪಾಲಿಕೆಯು ಕ್ರಯಕ್ಕೆ ನೀಡಲು ಶ್ರೀಮತಿ.ಕಾಮಾಕ್ಷಿ ಇವರಿಗೆ ನೀಡಲು ಉದ್ದೇಶಿಸಿರುವ ಜಾಗವನ್ನು ಕರ್ನಾಟಕ ಉದ್ಯಾನವನ, ಆಟದ ಮೈದಾನ ಮತ್ತು ತೆರೆದ ಪ್ರದೇಶಗಳ (ಪ್ರಿಸರ್ವೇಷನ್ ಅಂಡ್ ರೆಗ್ಯೂಲೇಷನ್) ಕಾಯ್ದೆ-1985ರನ್ವಯ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಉದ್ಯಾನವನ, ಆಟದ ಮೈದಾನ ಮತ್ತು ತೆರೆದ ಪ್ರದೇಶಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/351/ಎಂಎನ್‌ಯು/2004, ದಿನಾಂಕ: 15-04-2011 ರಲ್ಲಿ ಅಧಿಸೂಚಿಸಲಾಗಿದೆ. ಇದು ಕರ್ನಾಟಕ ರಾಜ್ಯ ಪತ್ರದ ದಿನಾಂಕ: 28-04-2011 ಭಾಗ-4ಎ ಪುಟ ಸಂಖ್ಯೆ:474 ಕ್ರಮ ಸಂಖ್ಯೆ:180 ರಲ್ಲಿ ಪ್ರಕಟಗೊಂಡಿರುತ್ತದೆ. ಮೇಲ್ಕಂಡ ಕಾಯ್ದೆಯ ಕಲಂ-6ರ ಅನುಸಾರ ಈ ಅಧಿಸೂಚನೆಯಲ್ಲಿ ಪ್ರಕಟಗೊಂಡಿರುವ ಪ್ರದೇಶವನ್ನು ನಿರ್ಧಿಷ್ಟ ಉದ್ದೇಶಕ್ಕೆ ಹೊರತುಪಡಿಸಿ, ಇತರೆ ಉಪಯೋಗದ ಉದ್ದೇಶಕ್ಕೆ ಪ್ರತಿಬಂಧಿಸಲಾಗಿದೆ ಹಾಗೂ ಕಲಂ 8(2)ರ ಅನುಸಾರ ಈ ಪ್ರದೇಶವನ್ನು ಬೇರೆ ಉದ್ದೇಶಕ್ಕೆ ಪರಬಾರೆ, ಕ್ರಯ, ಗುತ್ತಿಗೆ ಅಥವಾ ಪರವಾನಗಿ ನೀಡುವುದು, ಅನೂರ್ಜಿತ ಮತ್ತು ಪರಿಣಾಮ ಶೂನ್ಯ (NULL AND VIOD) ಎಂದು

ಸ್ಪಷ್ಟಪಡಿಸಲಾಗಿದೆ. ಅದೇ ಅಧಿನಿಯಮದ ಕಲಂ–6 ಮತ್ತು 8ನ್ನು ಉಲ್ಲಂಘಿಸಿದವರಿಗೆ 6 ತಿಂಗಳವರೆಗಿನ ಶಿಕ್ಷೆ ಅಥವಾ ದಂಡನೆ ಅಥವಾ ಎರಡನ್ನೂ ವಿಧಿಸುವುದಕ್ಕೆ ಕಲಂ–11ರಲ್ಲಿ ನಿರ್ಧಿಷ್ಟಪಡಿಸಿದೆ.

ಈ ಹಿನ್ನೆಲೆಯಲ್ಲಿ ಶ್ರೀಮತಿ.ಕಾಮಾಕ್ಷಿ ಯವರಿಗೆ ಕ್ರಯಕ್ಕೆ ನೀಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:168, ಸ್ವತ್ತಿನ ಸಂಖ್ಯೆ:1, 20ನೇ ಅಡ್ಡರಸ್ತೆ, ಮಾರೇನಹಳ್ಳಿ ಕೆರೆ ಅಂಗಳದ ಸ್ವತ್ತನ್ನು ಕ್ರಯಕ್ಕೆ ನೀಡಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಸಮಿತಿಯ ದಿನಾಂಕ:09–08–2011 ವಿಷಯ ಸಂಖ್ಯೆ:ನಯೋಅಸ್ಥಾಸ/75/2011–12 ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿಯ ದಿನಾಂಕ:26–09–2011ರ ವಿಷಯ ಸಂಖ್ಯೆ: ತೆಆಸ್ಥಾಸ. 281/2011–12 ರಲ್ಲಿ ನಿರ್ಣಯಿಸಿರುವ ನಿರ್ಣಯವು ದಿ:15–04–2011 ರಲ್ಲಿ ತೆಗೆದುಕೊಂಡಿರುವ ನಿರ್ಣಯವು ಕರ್ನಾಟಕ ಉದ್ಯಾನವನ, ಆಟದ ಮೈದಾನ ಮತ್ತು ತೆರೆದ ಪ್ರದೇಶಗಳ (ಪ್ರಿಸರ್ವೇಷನ್ ಅಂಡ್ ರೆಗ್ಯೂಲೇಷನ್) ಕಾಯ್ದೆ–1985ರ ಅಧಿನಿಯಮ ಕಲಂ–6 ಹಾಗೂ 8ರ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ, ಮೇಲ್ಕಂಡ ನಿರ್ಣಯಗಳನ್ನು ಏಕೆ ರದ್ದುಪಡಿಸಬಾರದು? ಎಂಬುದಕ್ಕೆ ಕರ್ನಾಟಕ ಪೌರನಿಗಮಗಳ ಕಾಯ್ದೆ–1976ರ ಕಲಂ–98(2) ರನ್ವಯ ಮಾನ್ಯ ಸರ್ಕಾರವು ಈ ಕಾರಣ ಕೇಳುವ ನೋಟೀಸ್‌ನ್ನು ಜಾರಿ ಮಾಡಿರುತ್ತದೆ. ಈ ನಿರ್ಣಯವನ್ನು

ರದ್ದುಪಡಿಸುವ ಬಗ್ಗೆ ಸ್ಥಾಯಿಸಮಿತಿಗಳ ಹೇಳಿಕೆ / ಸಮಜಾಯಿಷಿಗಳೇನಾದರೂ ಇದ್ದಲ್ಲಿ, ಈ ನೋಟೀಸ್ ತಲುಪಿದ

ದಿನಾಂಕದಿಂದ 15 ದಿನಗಳೊಳಗಾಗಿ ಸರ್ಕಾರಕ್ಕೆ ಲಿಖಿತವಾಗಿ ಕಳುಹಿಸಿಕೊಡುವಂತೆ ಸೂಚಿಸಿರುತ್ತದೆ. ಹಾಗೂ ನಿಗಧಿತ ಸಮಯದೊಳಗೆ ಹೇಳಿಕೆ/ ಸಮಜಾಯಿಷಿ ಬಾರದಿದ್ದಲ್ಲಿ ಪರಿಶೀಲಿಸಿ ಏಕಪಕ್ಷಿಯವಾಗಿ ತೀರ್ಮಾನವನ್ನು ಕೈಗೊಳ್ಳಲಾಗುವುದೆಂದು ತಿಳಿಸಿರುತ್ತದೆ.

ಆದುದರಿಂದ, ಮಾನ್ಯ ಸರ್ಕಾರದ ಕಾರಣ ಕೇಳುವ ನೋಟೀಸ್ ಪತ್ರಕ್ಕೆ ಉತ್ತರ ನೀಡುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಬೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಸರ್ಕಾರದ ದಿನಾಂಕ: 09–08–2012ರ ಕಾರಣ ಕೇಳಿ ನೋಟಿಸಿಗೆ ಸಂಬಂಧಿಸಿದಂತೆ ಪರಿಶೀಲಿಸಲಾಗಿ, ಶ್ರೀಮತಿ ಕಾಮಾಕ್ಷಿ ರವರಿಗೆ ವಾರ್ಡ್ ಸಂಖ್ಯೆ: 168 ರ ಮಾರೇನಹಳ್ಳಿ ಕೆರೆ ಅಂಗಳದ, 20ನೇ ಅಡ್ಡರಸ್ತೆ, ಸ್ವತ್ತಿನ ಸಂಖ್ಯೆ: 1ರ ಸ್ವತ್ತಿನ ಅಂಚಿನ ಭಾಗದ 14x20 ಅಡಿಗಳ ಜಾಗವನ್ನು ಕ್ರಯಕ್ಕೆ ನೀಡುವ ಕುರಿತಂತೆ ಈ ಸ್ಥಾಯಿ ಸಮಿತಿಯಿಂದ ದಿನಾಂಕ: 09–08–2011 ರಂದು ಆಯುಕ್ತರ ಟಿಪ್ಪಣಿಯನ್ನು ಒಪ್ಪಿದ್ದು, ದಿನಾಂಕ: 22–07–2011ರ ಅಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿತ ಜಾಗವು ಉದ್ಯಾನವನದಲ್ಲಿ ಬರುತ್ತಿದ್ದು, ಈ ಪ್ರದೇಶವು ಕರ್ನಾಟಕ ಉದ್ಯಾನವನ, ಆಟದ ಮೈದಾನ ಮತ್ತು ತೆರೆದ ಪ್ರದೇಶಗಳ (ಪ್ರಿಸರ್ವೇಷನ್ ಅಂಡ್ ರೆಗ್ಯೂಲೇಷನ್) ಕಾಯ್ದೆ 1985ರನ್ವಯ ನಿರ್ದಿಷ್ಟಪಡಿಸಿದ ಉದ್ದೇಶಕ್ಕೆ ಹೊರತುಪಡಿಸಿ ಇತರೆ ಉದ್ದೇಶಕ್ಕೆ ಕ್ರಯ/ಗುತ್ತಿಗೆ ಅಥವಾ ಪರವಾನಗಿ ನೀಡಲು ಸರ್ಕಾರಿ ನಿಯಮಗಳನ್ವಯ ಬರುವುದಿಲ್ಲವೆಂದು ತಿಳಿಸಿರುವುದರಿಂದ ಸದರಿ ಪ್ರಸ್ತಾವನೆಯನ್ನು ಒಪ್ಪಲಾಗಿದ್ದು, ಈ ಹಿನ್ನೆಲೆಯಲ್ಲಿ ಈ ಸ್ಥಾಯಿ ಸಮಿತಿಯಿಂದ ಪ್ರಸ್ತಾಪಿತ ಜಾಗವನ್ನು ಕ್ರಯಕ್ಕೆ ನೀಡಬಾರದೆಂದು ಮತ್ತೋಮ್ಮೆ ತೀರ್ಮಾನಿಸಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06.11.2012ರ ನಿರ್ಣಯ.

**ನಿರ್ಣಯ : ನಗರ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ದಿ. 06–11–2012ರ ನಿರ್ಣಯವನ್ನು ಸಮಿತಿಯು ಒಪ್ಪಿರುತ್ತದೆ.**

## *10]. ವಿಷಯದ ಸಂಖ್ಯೆ :–ತೆಆಸ್ಥಾಸ/ 139/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 29.08.2012 ರಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ವಾರ್ಡ್ ಸಂಖ್ಯೆ 165ರ ಗಣೇಶ ಮಂದಿರ ವ್ಯಾಪ್ತಿಯಲ್ಲಿನ ಕ್ರೀಡಾ ಕೇಂದ್ರ ಆಟದ ಮೈದಾನದ ಅಭಿವೃದ್ಧಿ ಕಾಮಗಾರಿಗೆ ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು ಕ್ಷೇತ್ರ ತಪಾಸಣಾ ಸಮಯದಲ್ಲಿ ಬನಶಂಕರಿ 2ನೇ ಹಂತದ ನಿವಾಸಿಗಳ ವೇದಿಕೆ (ನೋ) ರವರ ಹಾಗೂ ಸಾರ್ವಜನಿಕರ ಕೋರಿಕೆಯ ಮೇರೆಗೆ ಆಟದ ಮೈದಾನದ ಅಭಿವೃದ್ಧಿ (Improvements to Kreeda Kendra Play Gound BSK 2$^{nd}$ stage in ward No.165) ಕಾಮಗಾರಿಯನ್ನು ಕೈಗೊಳ್ಳಲು ಸೂಚಿಸಿರುತ್ತಾರೆ. ಈ ಸಂಬಂಧವಾಗಿ ದಿನಾಂಕ : 20.09.2011ರಂದು ಮಾನ್ಯ ಆಯುಕ್ತರವರಿಗೆ ಪತ್ರ ಬರೆದು ಲೆಕ್ಕಶೀಷಿಕೆ ಪಿ–2434 ರಲ್ಲಿ ರೂ 80.00 ಲಕ್ಷಗಳ ಅನುದಾನವನ್ನು

ಶಾಸಕರ ಅನುದಾನದಡಿಯಲ್ಲಿ ಭರಿಸಲು ಹಾಗೂ ಕಾಮಗಾರಿ ಪ್ರಮಾಣ ಪತ್ರ ನೀಡಿ, ಕೆ.ಆರ್.ಡಿ.ಐ.ಎಲ್.ರವರಿಂದ ಅನುಷ್ಠಾನಗೊಳಿಸುವಂತೆ ಸೂಚಿಸಿರುತ್ತಾರೆ.

ಸದರಿ ಕಾಮಗಾರಿಯ ಆಡಳಿತಾತ್ಮಕ ಅನುಮೋದನೆ (ಅಂದಾಜುಪಟ್ಟಿ ಅನುಮೋದನೆ)ಗಾಗಿ ಮಾನ್ಯ ಆಯುಕ್ತರು ಸಮಿತಿಗೆ ಮಂಡಿಸಲು ಸೂಚಿಸಿರುವಂತೆ ಹಾಗೂ ಉಲ್ಲೇಖ 1ರ ಸುತ್ತೋಲೆಯಂತೆ ಈ ಕಾಮಗಾರಿಯನ್ನು 2012-13ನೇ ಸಾಲಿನ ಆಯವ್ಯಯದ ಅನುದಾನದಲ್ಲಿ ಭರಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಗಳ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 29.08.2012ರ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ : 24.09.2012ರ ನಿರ್ಣಯ.

| Sl. No | Ward No | Name of Work | Est. Cost |
|---|---|---|---|
| 1 | 165 | Improvements to Kreeda Kendra Play Gound BSK 2nd stage in ward No.165 | 80.00 |

**ನಿರ್ಣಯ : ವಿಶೇಷ ಆಯುಕ್ತರು (ಯೋಜನೆ)ರ ದಿ. 29-08-2012ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿರುತ್ತದೆ.**

## *11]. ವಿಷಯದ ಸಂಖ್ಯೆ :-ತೆಆಸ್ಥಾಸ/140/2012-13*

ಆಯುಕ್ತರ ಟಿಪ್ಪಣಿ ದಿನಾಂಕ : 11.12.2012 ರಲ್ಲಿ ವಿವರಿಸಿರುವಂತೆ, ಮಹಾಲಕ್ಷ್ಮಿಪುರಂ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ 43ರ ನಂದಿನಿ ಬಡಾವಣೆಯಲ್ಲಿ ಈಜುಕೊಳವನ್ನು ಇತರೆ ಕಾಮಗಾರಿಗಳೊಂದಿಗೆ ನಿರ್ಮಿಸುವ ಯೋಜನೆಯನ್ನು ರೂ.1000.00 ಲಕ್ಷಗಳಿಗೆ ಅಂದಾಜು ಪಟ್ಟಿಗಳನ್ನು ಮುಖ್ಯ ಅಭಿಯಂತರರು (ಪಶ್ಚಿಮ) ರವರು ತಯಾರಿಸಿದ್ದು ದಿನಾಂಕ : 20.06.2012ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ ತೆಆಸ್ಥಾಸ/73/2012-13ರಲ್ಲಿ ಹಾಗೂ ದಿನಾಂಕ : 30.07.2012ರ ಕೌನ್ಸಿಲ್ ವಿಷಯ ಸಂಖ್ಯೆ : 40(182)12-13ರಲ್ಲಿ, 2012-13ನೇ ಸಾಲಿನಲ್ಲಿ ಈ ಯೋಜನೆಯ ಕಾಮಗಾರಿಯ ಅಂದಾಜು ಮೊತ್ತದ ಶೇ.40 ರಷ್ಟನ್ನು ಆಯವ್ಯಯದಲ್ಲಿ ಕಾಯ್ದಿರಿಸಿ, ಆಡಳಿತಾತ್ಮಕ ಅನುಮೋದನೆ ಹಾಗೂ 2012-13ನೇ ಸಾಲಿನ ಆಯವ್ಯಯದ ಅನುದಾನಕ್ಕೆ ಸೀಮಿತಗೊಳಿಸಿ, ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಮುಂದುವರಿದು ಕಾಮಗಾರಿಯನ್ನು ಕೈಗೊಳ್ಳಲು ಕಾಮಗಾರಿಯ ಅಂದಾಜು ಮೊತ್ತದ ಶೇ.40ರಷ್ಟನ್ನು ಒದಗಿಸಲು 2012-13ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-2231 (Construction of Swimming pool and other development works at ward No.43) ಅಡಿ ಚಾಲ್ತಿ ಕಾಮಗರಿಗಳಿಗೆ ರೂ.200.00 ಲಕ್ಷಗಳು ಮಾತ್ರ ನಿಗಧಿಯಾಗಿರುತ್ತದೆ. ಇನ್ನುಳಿದ ರೂ.200.00 ಲಕ್ಷಗಳನ್ನು ಸದರಿ ಕಾಮಗಾರಿಗೆ ಒದಗಿಸುವ ಬಗ್ಗೆ ನಿರ್ಣಯ ಕೈಗೊಳ್ಳಲು ಕರ್ನಾಟಕ ಮುನಿಸಿಪಲ್ ಕಾಯ್ದೆ ನಿಯಮ 172ರ ರೀತ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಲಾದ ಟಿಪ್ಪಣಿ

**ನಿರ್ಣಯ : ಆಯುಕ್ತರ ದಿ. 11-12-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗೆ ರೂ.200.00 (ರೂ.ಇನ್ನೂರು ಲಕ್ಷಗಳು) ಲಕ್ಷಗಳನ್ನು ಪಿ.ಕೋಡ್ 2415ರಲ್ಲಿ ಇರುವ ಅನುದಾನದಲ್ಲಿ ಒದಗಿಸಬಹುದೆಂದು ಸಮಿತಿಯು ತೀರ್ಮಾನಿಸಿತು.**

## *12]. ವಿಷಯದ ಸಂಖ್ಯೆ :-ತೆಆಸ್ಥಾಸ/141/2012-13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಮುಲೆಅ/ಪಿಜಿ(5)/ಪಿಆರ್/16/12-13, ದಿನಾಂಕ : 06.12.2012 ರಲ್ಲಿ ವಿವರಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ : ಆಇ(ವಿಶೇಷ)229ಪಿ.ಇ.ಎನ್ 2012, ದಿನಾಂಕ : 25.10.2012ರ ಸರ್ಕಾರಿ ಆದೇಶದಲ್ಲಿ ರಾಜ್ಯ ಸರ್ಕಾರ ನಿವೃತ್ತಿ ವೇತನದಾರರಿಗೆ ಒಂದು ಕಂತು ಹೆಚ್ಚುವರಿ ತುಟ್ಟಿಭತ್ಯೆಯನ್ನು ಶೇ.4% ದರದಲ್ಲಿ ಮಂಜೂರು ಮಾಡಿರುತ್ತದೆ. ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಪ್ರಕಾರ ನಿವೃತ್ತಿ

ವೇತನದ ಹೆಚ್ಚುವರಿ ತುಟ್ಟಿಭತ್ಯೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಬೇಕಾಗಿರುತ್ತದೆ, ಸದರಿ ಸರ್ಕಾರಿ ಆದೇಶವನ್ನು ಪಾಲಿಕೆ ಪಿಂಚಣಿದಾರರಿಗೆ ಅಳವಡಿಸಿಕೊಂಡು ದಿನಾಂಕ : 01.07.2012ರಿಂದ ಅನ್ವಯಿಸುವಂತೆ ಶೇ.40% ಹೆಚ್ಚುವರಿ ತುಟ್ಟಿ ಭತ್ಯೆಯ ಬಾಕಿಯನ್ನು ಪಾವತಿಸಬೇಕಾಗಿರುತ್ತದೆ.

ಸದರಿ ಹೆಚ್ಚುವರಿ ರೂ.1,47,19,185.00ಗಳ ತುಟ್ಟಿಭತ್ಯೆಯ ವೆಚ್ಚವನ್ನು 2012–13ನೇ ಸಾಲಿನ ಆಯವ್ಯಯದ ಅಂದಾಜುಗಳ ಲೆಕ್ಕಶೀರ್ಷಿಕೆ 02–ಸಾಮಾನ್ಯ ಆಡಳಿತ/ಆಡಳಿತ ವೆಚ್ಚಗಳು/ನೌಕರರ ನಿವೃತ್ತಿ ಸೌಲಭ್ಯಗಳ ಅಡಿಯಲ್ಲಿ ಭರಿಸಲು ಲೇಖಾನುದಾನದಲ್ಲಿ ಅನುವು ಮಾಡಿಕೊಳ್ಳಲಾಗಿದೆ. ಈ ತುಟ್ಟಿಭತ್ಯೆ ಬಾಕಿ ಪಾವತಿ ಮಾಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ಆಯುಕ್ತರ ದಿ. 06–12–2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## *ಹೆಚ್ಚುವರಿ ವಿಷಯಗಳು :–*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/142/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 18.12.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು, ತಾವು ಪ್ರತಿನಿಧಿಸಿರುವ ವಾರ್ಡ್ ಸಂಖ್ಯೆ 129ರ ವ್ಯಾಪ್ತಿಯು ಹೊಸದಾಗಿ ಬಿ.ಬಿ.ಎಂ.ಪಿ. ಗೆ ಸೇರ್ಪಡೆಗೊಂಡಿದ್ದು, ಇದರಲ್ಲಿ **ಉಲ್ಲಾಳು ಗ್ರಾಮವು** ಸಹ ಸೇರಿರುತ್ತದೆ.

ಸದರಿ ಗ್ರಾಮವು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದು, ಸದರಿ ಗ್ರಾಮವನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ 06 ಕಾಮಗಾರಿಗಳ ಅಂದಾಜು ಮೊತ್ತ ರೂ.119.94 ಲಕ್ಷಗಳಿಗೆ ಜಾಬ್ ನಂಬರ್ ಹಾಗೂ ಆಡಳಿತಾತ್ಮಕ ಅನುಮೋದನೆ ನಿಡಲು ಮಾನ್ಯ ಪಾಲಿಕೆ ಸದಸ್ಯರು ಪತ್ರದ ಮುಖಾಂತರ ಕೋರಿರುತ್ತಾರೆ.

2012–13ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–2654 ಅಡಿಯಲ್ಲಿ **"110 ಗ್ರಾಮಗಳಿಗೆ ವಿಶೇಷ ಅಭಿವೃದ್ಧಿ ಪ್ಯಾಕೇಜ್"** ನಲ್ಲಿ ನಿಗದಿ ಪಡಿಸಲಾಗಿರುವ ರೂ.13500.00 ಲಕ್ಷಗಳ ಅನುದಾನದಲ್ಲಿ ಭರಿಸಬಹುದಾಗಿದ್ದು, ಸದರಿ 06 ಕಾಮಗಾರಿಗಳ ಅಂದಾಜು ಮೊತ್ತ ರೂ.119.94 ಲಕ್ಷಗಳನ್ನು ಮಂಜೂರಾತಿ ಮಾಡಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ:

| ಕ್ರ ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 01 | Providing RCC drain with covering slab at 3rd cross surrounding Ullal main road in ward No.129 | 19.99 |
| 02 | Providing RCC drain with covering slab at 5th and 6th cross surrounding Ullal main road in ward No.129 | 19.99 |
| 03 | Providing RCC drain with covering slab at K K Krishnappa House Ullal main road in ward No.129 | 19.99 |
| 04 | Construction of SWD covering slab at 12th cross Ullal main road in ward No.129 | 19.99 |
| 05 | Providing Asphalting at Gov't. Press Layout roads Ullal main road in ward No.129 | 19.99 |
| 06 | Providing RCC drain with covering slab at Mise Veerabhadrappa House Ullal main road in ward No.129 | 19.99 |
| | **Total** | **119.94** |

**ನಿರ್ಣಯ : ಆಯುಕ್ತರ ದಿ.18–12–2012ರ ಟಿಪ್ಪಣಿಯನ್ನು ಒಪ್ಪುತ್ತಾ ವಾರ್ಡಿನ ಸದಸ್ಯರು ಕೋರಿರುವಂತೆ ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಬಹುದೆಂದು ಸಮಿತಿಯು ತೀರ್ಮಾನಿಸಿತು.**

## *02]. ವಿಷಯದ ಸಂಖ್ಯೆ :–ತೆಆಸ್ಥಾಸ/143/2012–13*

ವಿಶೇಷ ಆಯುಕ್ತರು (ಯೋಜನೆ) ಟಿಪ್ಪಣಿ ದಿನಾಂಕ : 05.07.2012 ರಲ್ಲಿ ವಿವರಿಸಿರುವಂತೆ, ಎನ್. ಚಂದ್ರಶೇಖರ್ ರಾಜು, ಸದಸ್ಯರು, ಬಿ.ಬಿ.ಎಂ.ಪಿ, ಜೆ.ಪಿ.ನಗರ ವಾರ್ಡ್ ನಂ.177 ರವರ ಉಲ್ಲೇಖಿತ ಪತ್ರದಲ್ಲಿ 2012–13ನೇ ಸಾಲಿನ ಆಯವ್ಯಯದಲ್ಲಿ ಅನುದಾನ ನಿಗಧಿಪಡಿಸಲು ಕೋರಿರುತ್ತಾರೆ.

2012–13ನೇ ಸಾಲಿನ ಆಯವ್ಯಯದಲ್ಲಿ ಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 11 ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ರೂ.200.00 ಲಕ್ಷಗಳನ್ನು ಒದಗಿಸಲು ಕೋರಿರುತ್ತಾರೆ. ಈ ಸಂಬಂಧ ಮಾನ್ಯ ಶಾಸಕರು ಸಲ್ಲಿಸಿರುವ ಪತ್ರವನ್ನು ಆಯವ್ಯಯದಲ್ಲಿ ಅವಕಾಶ ಕಲ್ಪಿಸುವ ಬಗ್ಗೆ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ಆಯುಕ್ತರ ದಿ.05–07–2012ರ ಟಿಪ್ಪಣಿಯಲ್ಲಿ ಕೋರಿರುವಂತೆ 2012–13ನೇ ಯ ಸಾಲಿನ ಆಯವ್ಯಯದಲ್ಲಿ ಪಿ–ಕೋಡ್ 2439ರಲ್ಲಿ ವಾರ್ಡ್ 177ಕ್ಕೆ ರೂ.200/– ಲಕ್ಷಗಳು (ರೂ.ಇನ್ನೂರು ಲಕ್ಷಗಳನ್ನು) ಒದಗಿಸಲು ಸಮಿತಿಯು ತೀರ್ಮಾನಿಸಿತು.**

## *03]. ವಿಷಯದ ಸಂಖ್ಯೆ :–ತೆಆಸ್ಥಾಸ/144/2012–13*

ವಿಶೇಷ ಆಯುಕ್ತರು (ಯೋಜನೆ) ಟಿಪ್ಪಣಿ ದಿನಾಂಕ : 24.12.2012 ರಲ್ಲಿ ವಿವರಿಸಿರುವಂತೆ, ಶ್ರೀ. ಡಿ.ಬಿ.ಚಂದ್ರೇಗೌಡ, ಎಂ.ಪಿ. ಬೆಂಗಳೂರು ಉತ್ತರ ಕ್ಷೇತ್ರ, ರವರ ಪತ್ರ ಸಂಖ್ಯೆ : ಲೋಸ:ಗೃಕ:403:2012–13, ದಿನಾಂಕ : 17.11.2012ರ ಪತ್ರದಲ್ಲಿ 2012–13ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ದಸರಾ ಮಹೋತ್ಸವ ಸಮಿತಿ, ಮುನಿರೆಡ್ಡಿಪಾಳ್ಯ, ಮಠದಹಳ್ಳಿ, ಬೆಂಗಳೂರು ಇವರು ಮನವಿ ಪತ್ರದಲ್ಲಿ ಮುನಿರೆಡ್ಡಿಪಾಳ್ಯ ಇಲ್ಲಿ ದಸರಾ ಉತ್ಸವವನ್ನು ಆಚರಿಸಿದ ವೆಚ್ಚ ಪಾವತಿಸಲು ಪ್ರತಿ ವರ್ಷ ರೂ.15.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, 2012–13ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ **ಪಿ–0010–ದಸರಾ ಮಹೋತ್ಸವ–ಮುನಿರಡ್ಡಿಪಾಳ್ಯ** ಅಡಿ ನಿಗಧಿಯಾಗಿರುವ ರೂ.**15.00** ಲಕ್ಷಗಳ ಅನುದಾನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ಆಯುಕ್ತರ ದಿ. 24–12–2012ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿರುತ್ತದೆ.**

## *ಸುಮೋಟೋ ನಿರ್ಣಯ:–*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/145/2012–13*

ನಿರ್ಣಯ: 2012–13ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–2415–ಮೀಸಲು ನಿಧಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುದಾನದಲ್ಲಿ ಒದಗಿಸಿರುವ ರೂ.9900/– ಲಕ್ಷಗಳಲ್ಲಿ ವಾರ್ಡ್ ಸಂಖ್ಯೆ : 05, 20, 25, 31, 36, 40, 53, 96, 128, 153, 181 ರ ವಾರ್ಡಿನ ಸದಸ್ಯರುಗಳು ತಮ್ಮ ವಾರ್ಡಿನ ಅಭಿವೃದ್ಧಿ ಕಾಮಗಾರಿಗಳಿಗಾಗಿ ಅನುದಾನ ಮಂಜೂರು ಮಾಡಲು ಕೋರಿದ್ದು, ಮೇಲ್ಕಂಡ ಲೆಕ್ಕಶೀರ್ಷಿಕೆ ಅಡಿಯಲ್ಲಿನ ಅನುದಾನದಲ್ಲಿ ತಲಾ ರೂ.100/– ಲಕ್ಷಗಳಂತೆ ವಾರ್ಡಿನ ಅಭಿವೃದ್ಧಿ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡಿ ಕಾಮಗಾರಿಗಳನ್ನು ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.

**ಮುನೀಂದ್ರ ಕುಮಾರ್.ಕೆ.ಎ**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**